

بسم اللہِ الرّحمٰن الرّحیم

# ಹಝ್ರತ್ ಮಸೀಹ್ ಮೌಊದ್(ಅ)ರ ವಿನಯ ಮತ್ತು ನಮ್ರತೆಯ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **05–06–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

. ಕಳೆದ ಖುತ್ಬದಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರ ವಿನಯ ಮತ್ತು ನಮ್ರತೆಯ ಘಟನೆಗಳು ಹಾಗೂ ಉಪದೇಶಗಳನ್ನು ವಿವರಿಸಲಾಗಿತ್ತು. ಇಂದು ಸಹ ಇದೇ ವಿಷಯಕ್ಕೆ ಸಂಬಂಧಿಸಿದ ಕೆಲವು ಘಟನೆಗಳನ್ನು ವಿವರಿಸುತ್ತೇನೆ.

ಹಝ್ರತ್ ಶೇಖ್ ಮುಹಮ್ಮದ್ ಇಸ್ಮಾಯಿಲ್ ಸಾಹಿಬ್(ರ) ವಿವರಿಸುತ್ತಾರೆ: ಹಝ್ರತ್ ಮಸೀಹ್ ಮೌಊದ್(ಅ)ರ ಉನ್ನತ ನೈತಿಕತೆಯು ಹೇಗಿತ್ತೆಂದರೆ, ಖಾದಿಯಾನಿನಲ್ಲಿ ಸದಾ ಅವರ ವಿರುದ್ಧ ಶತ್ರುತ್ವ ಸಾಧಿಸುವಲ್ಲಿ ನಿರತರಾಗಿದ್ದ ಮತ್ತು ವಿರೋಧಿಸಲು ಯಾವುದೇ ಅವಕಾಶವನ್ನು ಕೈಬಿಡದಿದ್ದ ಜನರು ಎಂದಾದರೂ ಅವರ ಬಾಗಿಲನ್ನು ತಟ್ಟಿದರೆ, ಅವರು ಬರಿಗಾಲಿನಲ್ಲಿ ಹೊರಬರುತ್ತಿದ್ದರು ಮತ್ತು ಅವರ ಸಲಾಮಿಗೆ ಉತ್ತರಿಸಿ, 'ನೀವು ಚೆನ್ನಾಗಿದ್ದೀರಾ?' ಎಂದು ಕೇಳುತ್ತಿದ್ದರು ಮತ್ತು ಅವರ ಮನೆಯವರ ಕುರಿತು ವಿಚಾರಿಸುತ್ತಿದ್ದರು ಹಾಗೂ 'ಏಕೆ ಬಂದಿರಿ?' ಎಂದು ಕೇಳುತ್ತಿದ್ದರು. ಅನಂತರ ಅವರು ಯಾವುದೇ ಅಗತ್ಯವನ್ನು ಮುಂದಿಟ್ಟರೂ, 'ಎಷ್ಟು ಬೇಕು?' ಎಂದು ಕೇಳಿ ಅವರ ಅಗತ್ಯಕ್ಕಿಂತ ಹೆಚ್ಚಿನದನ್ನು ತಂದುಕೊಡುತ್ತಿದ್ದರು.

ಹಝ್ರತ್ ಮೌಲ್ವಿ ಶೇರ್ ಅಲಿ ಸಾಹಿಬ್(ರ) ಒಮ್ಮೆ ಹೀಗೆ ಹೇಳಿದರು: ಮೀರಾನ್ ಬಕ್ಷ್ ಸೌದಾಯಿ ಎಂಬೊಬ್ಬ ಬುದ್ಧಿಮಾಂದ್ಯ ವ್ಯಕ್ತಿಯಿದ್ದನು. ಒಮ್ಮೆ ಹಝ್ರತ್ ಮಸೀಹ್ ಮೌಊದ್(ಅ) ದೊಡ್ಡ ಮಸೀದಿಯಿಂದ ಬರುತ್ತಿದ್ದಾಗ ಅವನು ಅತ್ಯಂತ ಅಸಭ್ಯವಾಗಿ ಕರೆದು ಹಣ ಕೇಳಿದನು. ಅವರು ತಮ್ಮ ಕರವಸ್ತ್ರದಿಂದ ನಾಲ್ಕು ಅಥವಾ ಎಂಟು ಆಣೆಗಳನ್ನು ತೆಗೆದು ಅವನಿಗೆ ನೀಡಿದರು, ಅವನು ಸಂತೋಷದಿಂದ ಹೊರಟುಹೋದನು. ಮಾಸ್ಟರ್ ನಝೀರ್ ಹುಸೇನ್ ಸಾಹಿಬ್ ವಿವರಿಸುತ್ತಾರೆ: ನಾನು ನನ್ನ ತಂದೆಯೊಂದಿಗೆ ಖಾದಿಯಾನಿಗೆ ಹಝ್ರತ್ ಮಸೀಹ್ ಮೌಊದ್(ಅ)ರ ಬಳಿ ಬಂದಾಗಲೆಲ್ಲ ಮತ್ತು ಹಕೀಮ್ ಮರ್‌ಹಮ್ ಈಸಾ ಸಾಹಿಬ್ ಬಂದಿದ್ದಾರೆ ಎಂದು ಹಝ್ರತ್ ಮಸೀಹ್ ಮೌಊದ್(ಅ)ರಿಗೆ ತಿಳಿಸಲಾಗುವಾಗ, ಸುದ್ದಿ ತಲುಪಿದ ತಕ್ಷಣ ಅವರು ಸ್ವತಃ ಹೊರಬರುತ್ತಿದ್ದರು ಮತ್ತು ತಾವೇ ಏನಾದರೂ ತಿನ್ನಲು ನೀಡುತ್ತಿದ್ದರು ಎಂಬುದನ್ನೇ ನಾನು ಯಾವಾಗಲೂ ನೋಡಿದ್ದೇನೆ. ಹಝ್ರತ್ ಮಸೀಹ್ ಮೌಊದ್(ಅ) ಅತಿಥಿಗಳನ್ನು ಎಷ್ಟೊಂದು ಸರಳತೆಯಿಂದ ಭೇಟಿಯಾಗುತ್ತಿದ್ದರೆಂದರೆ, ಕೆಲವೊಮ್ಮೆ ನಾನು ಅವರನ್ನು ಅವರ ಕೈಯಲ್ಲಿ ಲೇಖನಿಯಿರುವ ಸ್ಥಿತಿಯಲ್ಲಿ ನೋಡಿದ್ದೇನೆ ಮತ್ತು ಕೆಲವೊಮ್ಮೆ ಅವರು ನಮ್ಮನ್ನು ಭೇಟಿಯಾಗಲು ಬರಿಗಾಲಿನಲ್ಲಿ ಬರುತ್ತಿದ್ದರು, ಅಂದರೆ ಒಳಗೆ ಹೇಗಿದ್ದರೋ ಅದೇ ಸ್ಥಿತಿಯಲ್ಲಿ ಹೊರಬರುತ್ತಿದ್ದರು.

ಹಝ್ರತ್ ಮುಫ್ತಿ ಮುಹಮ್ಮದ್ ಸಾದಿಕ್ ಸಾಹಿಬ್(ರ) ಹೇಳುತ್ತಾರೆ: ಒಮ್ಮೆ ನಾನು ಲಾಹೋರ್‌ನಿಂದ ಖಾದಿಯಾನಿಗೆ ಬಂದಿದ್ದೆ. ಹಝ್ರತ್ ಮಸೀಹ್ ಮೌಊದ್(ಅ) ನನ್ನನ್ನು ಮಸ್ಜಿದ್ ಮುಬಾರಕ್‌ನಲ್ಲಿ ಕೂರಿಸಿ, 'ಕುಳಿತುಕೋ, ನಾನು ಊಟ ತರುತ್ತೇನೆ' ಎಂದು ಹೇಳಿದರು. ಅನಂತರ ಕೆಲವು ನಿಮಿಷಗಳ ಬಳಿಕ ತಾವೇ ಒಂದು ದೊಡ್ಡ ತಟ್ಟೆಯಲ್ಲಿ ಊಟವನ್ನು ತಂದರು. ಅನಂತರ, 'ನೀವು ಊಟ ಮಾಡಿರಿ, ನಾನು ನೀರು ತರುತ್ತೇನೆ' ಎಂದು ಹೇಳಿದರು. ಮುಫ್ತಿ ಸಾಹಿಬ್(ರ) ಹೇಳುತ್ತಾರೆ: ನನ್ನ ಕಣ್ಣುಗಳಿಂದ ಅನಿಯಂತ್ರಿತವಾಗಿ ಕಣ್ಣೀರು ಹರಿಯಿತು.

ಹಝ್ರತ್ ಮುನ್ಷಿ ಜ಼ಫರ್ ಅಹ್ಮದ್ ಕಪೂರ್‌ಥಲವಿ ಸಾಹಿಬ್(ರ) ವಿವರಿಸುತ್ತಾರೆ: ಹಝ್ರತ್ ಮಸೀಹ್ ಮೌಊದ್(ಅ) ಎಂದಿಗೂ ಬಾಗಿಲು ತೆರೆದಿಟ್ಟು ಕುಳಿತುಕೊಳ್ಳುತ್ತಿರಲಿಲ್ಲ. ಅಂದರೆ ಬಾಗಿಲು ಮುಚ್ಚಿಯೇ ಕುಳಿತುಕೊಳ್ಳುತ್ತಿದ್ದರು. ನಾನು ಹಝ್ರತ್ ಮಸೀಹ್ ಮೌಊದ್(ಅ)ರ ಬಳಿ ಕುಳಿತಿದ್ದೆ. ಪದೇ ಪದೇ ಹಝ್ರತ್ ಸಾಹಿಬ್‌ಝಾದಾ ಮಿಯಾನ್ ಮಹ್ಮೂದ್ ಅಹ್ಮದ್ ಸಾಹಿಬ್ ಬರುತ್ತಿದ್ದರು ಮತ್ತು 'ಅಬ್ಬಾ, ಚಿಲಕ ತೆಗೆಯಿರಿ' ಎನ್ನುತ್ತಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ತಕ್ಷಣ ಎದ್ದು

ಬಾಗಿಲು ತೆರೆಯುತ್ತಿದ್ದರು. ಒಮ್ಮೆ ನಾನು ಅವರ ಸನ್ನಿಧಿಗೆ ಹೋದಾಗ ಹಝ್ರತ್ ಮಸೀಹ್ ಮೌಊದ್(ಅ) ಚಾಪೆಯ ಮೇಲೆ ಕುಳಿತಿದ್ದರು. ನನ್ನನ್ನು ಕಂಡಾಗ ಹಝ್ರತ್ ಮಸೀಹ್ ಮೌಊದ್(ಅ) ಮಂಚವನ್ನು ಎತ್ತಿಕೊಂಡು ಒಳಗೆ ಹೋದರು. 'ನಾನು ಎತ್ತಿಕೊಳ್ಳುತ್ತೇನೆ' ಎಂದು ನಾನು ಹೇಳಿದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: 'ಇದು ಬಹಳ ಭಾರವಿದೆ. ನಿಮ್ಮಿಂದ ಎತ್ತಲು ಸಾಧ್ಯವಲ್ಲ.' ಒಳಗೆ ಮಂಚವನ್ನು ಹಾಸಿ, 'ನೀವು ಇದರ ಮೇಲೆ ಕುಳಿತುಕೊಳ್ಳಿ, ನನಗೆ ನೆಲದಲ್ಲಿ ಆರಾಮವಿದೆ. ನಾನು ಕೆಳಗೆ ಕುಳಿತುಕೊಳ್ಳುತ್ತೇನೆ'. ನನಗೆ ಬಾಯಾರಿಕೆಯಾದಾಗ, 'ನಾನು ಒಳಗಿಂದ ಗ್ಲಾಸ್ ತರುತ್ತೇನೆ' ಎಂದು ಹೇಳಿದರು. ನಂತರ ಮಣಿಪುರದಿಂದ ಯಾರೋ ಕಳುಹಿಸಿದ್ದ ಎರಡು ಶರಬತ್ ಬಾಟಲಿಗಳನ್ನು ಒಳಗಿನಿಂದ ತಂದರು. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: 'ಈ ಬಾಟಲಿಗಳನ್ನು ಇಟ್ಟು ಬಹಳ ದಿನಗಳಾದವು, ಮೊದಲು ಯಾವುದಾದರೂ ಸ್ನೇಹಿತರನ್ನು ಕರೆದು ಕುಡಿಸಿ ನಂತರ ನಾವು ಕುಡಿಯುತ್ತೇವೆ ಎಂದು ನಾನು ಬಯಸಿದೆ.' ನನಗೊಂದು ಗ್ಲಾಸ್ ಶರಬತ್ ತಯಾರಿಸಿ ಕೊಟ್ಟರು. 'ಮೊದಲು ನೀವು ಸ್ವಲ್ಪ ಕುಡಿಯಬೇಕು' ಎಂದು ನಾನು ಹೇಳಿದೆ. ಹಝ್ರತ್ ಮಸೀಹ್ ಮೌಊದ್(ಅ) ಒಂದು ಗುಟುಕು ಕುಡಿದರು. ನಾನು ಶರಬತ್ ಚೆನ್ನಾಗಿದೆ ಎಂದು ಹೇಳಿದೆ. ಆಗ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: 'ಒಂದು ಬಾಟಲಿಯನ್ನು ನೀವು ತೆಗೆದುಕೊಳ್ಳಿರಿ, ಮತ್ತೊಂದು ಬಾಟಲಿಯನ್ನು ಹೊರಗೆ ಅತಿಥಿಗಳಿಗೆ ಕುಡಿಸಿರಿ.'

ಒಮ್ಮೆ ಲಾಹೋರ್‌ನಿಂದ ಡಾಕ್ಟರ್ ಅಲ್ಲಾಮ ಇಕ್ಬಾಲ್ ಮತ್ತು ಸರ್ ಶಿಹಾಬುದ್ದೀನ್ ಮುಂತಾದ ಗಣ್ಯರು ಹಝ್ರತ್ ಮಸೀಹ್ ಮೌಊದ್(ಅ)ರನ್ನು ಭೇಟಿಯಾಗಲು ಬಂದರು. ಈ ಭೇಟಿಯ ಬಗ್ಗೆ ಬಾಬು ಗುಲಾಮ್ ಮುಹಮ್ಮದ್ ಸಾಹಿಬ್ ವಿವರಿಸುತ್ತಾರೆ: ರಾತ್ರಿ ಊಟದ ನಂತರ ಮಂಚಗಳನ್ನು ಹಂಚುವಾಗ, ನಾನು ಗಟ್ಟಿಮುಟ್ಟಾದ ಒಂದು ದೊಡ್ಡ ಮಂಚವನ್ನು ತೆಗೆದುಕೊಂಡೆ, ಆದರೆ ಚೌಧರಿ ಶಿಹಾಬುದ್ದೀನ್ ಸಾಹಿಬ್ ನನ್ನ ಮಂಚವನ್ನು ತೆಗೆದುಕೊಂಡರು. ಹಝ್ರತ್ ಮಸೀಹ್ ಮೌಊದ್(ಅ) ಬಂದು ಪ್ರತಿಯೊಬ್ಬರೊಡನೆ 'ನಿಮಗೇನಾದರೂ ತೊಂದರೆಯಿದೆಯೇ?' ಎಂದು ವಿಚಾರಿಸಿದರು. 'ನನಗೆ ಯಾವ ತೊಂದರೆಯೂ ಇಲ್ಲ' ಎಂದು ಪ್ರತಿಯೊಬ್ಬರೂ ಹೇಳಿದರು. ಶಿಹಾಬುದ್ದೀನ್ ಸಾಹಿಬ್ ನನ್ನ ಮಂಚವನ್ನು ತೆಗೆದುಕೊಂಡಿದ್ದ ಕಾರಣದಿಂದ ನಾನು ಚಿಂತಿತನಾಗಿ ನಿಂತಿದ್ದೆ. ನನ್ನನ್ನು ನೋಡಿ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: 'ನಿಲ್ಲು, ನಾನು ನಿಮಗಾಗಿ ಒಳಗಿನಿಂದ ಮಂಚವನ್ನು ತರುತ್ತೇನೆ.' ಬಹಳ ಹೊತ್ತಿನ ನಂತರ ಕೂಡ ಯಾರೂ ಬರದಿದ್ದಾಗ ನಾನು ಒಳಗೆ ಇಣುಕಿ ನೋಡಿದೆ. ಒಬ್ಬ ವ್ಯಕ್ತಿ ವೇಗವಾಗಿ ಮಂಚವನ್ನು ಹೆಣೆಯುತ್ತಿದ್ದನು ಮತ್ತು ಹಝ್ರತ್ ಮಸೀಹ್ ಮೌಊದ್(ಅ) ಅವನ ತಲೆಯ ಬಳಿ ದೀಪ ಹಿಡಿದು ಕುಳಿತಿದ್ದರು. ಹಝ್ರತ್ ಮಸೀಹ್ ಮೌಊದ್(ಅ)ರ ಈ ಸ್ಥಿತಿಯನ್ನು ನೋಡಿ ನನಗೆ ಬಹಳ ನಾಚಿಕೆಯಾಯಿತು. 'ಹುಝೂರ್! ದೀಪವನ್ನು ನನಗೆ ಕೊಡಿ.' ಎಂದು ನಾನು ಹೇಳಿದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: 'ಈಗ ಒಂದು ಸುತ್ತು ಮಾತ್ರ ಉಳಿದಿದೆ.' ಹಝ್ರತ್ ಮಸೀಹ್ ಮೌಊದ್(ಅ)ರ ಈ ಉನ್ನತ ನೈತಿಕತೆಯನ್ನು ಕಂಡು ನನಗೆ ಕಣ್ಣೀರು ಬಂತು.

ಹಝ್ರತ್ ಮೌಲ್ವಿ ಅಬ್ದುಲ್ ಕರೀಮ್ ಸಿಯಾಲ್ಕೋಟಿ ಸಾಹಿಬ್(ರ) ವಿವರಿಸುತ್ತಾರೆ: ಇದು ಬಹುಶಃ 1896ರ ಮಾತಾಗಿದೆ. ಜೂನ್ ತಿಂಗಳಾಗಿತ್ತು ಮತ್ತು ಒಳಗಿನ ಕೊಠಡಿ ಹೊಸದಾಗಿ ನಿರ್ಮಾಣವಾಗಿತ್ತು. ಮಧ್ಯಾಹ್ನದ ಸಮಯದಲ್ಲಿ ಅಲ್ಲಿ ಮಂಚವನ್ನು ಹಾಕಲಾಗಿತ್ತು. ನಾನು ಮಲಗಿದೆ. ಹಝ್ರತ್ ಮಸೀಹ್ ಮೌಊದ್(ಅ) ನಡೆದಾಡುತ್ತಿದ್ದರು. ನಾನು ಎಚ್ಚರಗೊಂಡಾಗ ಹಝ್ರತ್ ಮಸೀಹ್ ಮೌಊದ್(ಅ) ಮಂಚದ ಕೆಳಗೆ ಮಲಗಿದ್ದನ್ನು ನೋಡಿದೆ. ನಾನು ಗಾಬರಿಗೊಂಡು ಎದ್ದು ಕುಳಿತೆ. 'ಏಕೆ ಎದ್ದಿರಿ?' ಎಂದು ಹಝ್ರತ್ ಮಸೀಹ್ ಮೌಊದ್(ಅ) ಕೇಳಿದರು. ನಾನು ಹೇಳಿದೆ: 'ನೀವು ನೆಲದಲ್ಲಿ ಮಲಗಿರುವಾಗ, ನಾನು ಮೇಲೆ ಹೇಗೆ ಮಲಗುವುದು?' ಮುಗುಳ್ನಕ್ಕು ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: 'ನಾನು ನಿಮಗಾಗಿ ಕಾವಲು ಕಾಯುತ್ತಿದ್ದೆ. ಹುಡುಗರು ಬೊಬ್ಬೆ ಹಾಕುವಾಗ ನಿಮ್ಮ ನಿದ್ದೆಗೆ ಭಂಗ ಬಾರದಿರಲಿ ಎಂದು ಅವರನ್ನು ತಡೆಯುತ್ತಿದ್ದೆ.'

ಹಝ್ರತ್ ಮುನ್ಶಿ ಇಮಾಮ್ ದೀನ್ ಸಾಹಿಬ್(ರ) ವಿವರಿಸುತ್ತಾರೆ: 1894ರಲ್ಲಿ ನಾನು ಹಝ್ರತ್ ಮಸೀಹ್ ಮೌಊದ್(ಅ)ರ ಹಸ್ತದಲ್ಲಿ ಬೈಅತ್ ಮಾಡಿದೆ. ಅಸರ್ ನಮಾಝಿನಲ್ಲಿ ಮುನ್‌ಶಿ ಅಬ್ದುಲ್ ಅಝೀಝ್ ಸಾಹಿಬ್ ನನ್ನೊಂದಿಗಿದ್ದರು. ನಮಾಝಿನ ನಂತರ ಮುನ್‌ಶಿ ಸಾಹಿಬ್ ನನ್ನ ಕಡೆಗೆ ಕೈತೋರಿಸಿ 'ಹುಝೂರ್! ಇವರ ಬೈಅತ್ ಪಡೆದುಕೊಳ್ಳಿರಿ' ಎಂದು ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ವಿನಂತಿಸಿಕೊಂಡರು. 'ಒಳಗೆ ಬನ್ನಿ.' ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ನಾನು ಒಳಗೆ ಬೈತುಲ್ ಫಿಕ್ರ್‌ಗೆ ಒಂಟಿಯಾಗಿ ಹೋದಾಗ, ಅವರು ನನ್ನನ್ನು ಮಂಚದ ತಲೆದಿಂಬಿನ ಬಳಿ ಕೂರಿಸಿದರು ಮತ್ತು ಸ್ವತಃ ಮಂಚದ ಕೆಳಗಿನ ಭಾಗದಲ್ಲಿ ಕುಳಿತುಕೊಂಡರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: 'ನನ್ನ ಸ್ಥಿತಿ ಹೇಗಿದೆಯೆಂದರೆ, ನಾನು ನಮಾಝಿನಲ್ಲಿ ನಿರತನಾಗಿರುವ ಸಮಯದಲ್ಲಿ ನೋವು ಅನುಭವಿಸುತ್ತಿರುವ ಒಬ್ಬ ವ್ಯಕ್ತಿಯ ಧ್ವನಿ ನನ್ನ ಕಿವಿಗೆ ಬಿದ್ದರೆ, ನಮಾಝನ್ನು ಮುರಿದಾದರೂ ಅವರಿಗೆ ಸಾಧ್ಯವಾದಷ್ಟು ಏನಾದರೂ ಮಾಡಬೇಕು ಮತ್ತು ಅವರೊಂದಿಗೆ ಸಹಾನುಭೂತಿ ತೋರಬೇಕು ಎಂದು ನಾನು ಬಯಸುತ್ತೇನೆ.

ಯಾರಾದರೂ ಸಂಕಷ್ಟ ಮತ್ತು ತೊಂದರೆಯಲ್ಲಿ ಇರುವಾಗ ಸಹಾಯ ಮಾಡದೇ ಇರುವುದು ನೈತಿಕತೆಗೆ ವಿರುದ್ಧವಾಗಿದೆ. ನಿಮ್ಮಿಂದ ಅವನಿಗಾಗಿ ಏನಾದರೂ ಮಾಡಲು ಸಾಧ್ಯವಾಗದಿದ್ದರೆ, ಪ್ರಾರ್ಥನೆಯನ್ನಾದರೂ ಮಾಡಬೇಕು. ಅಷ್ಟೇ ಅಲ್ಲ, ಪರರು ಮತ್ತು ಹಿಂದೂಗಳೊಂದಿಗೂ ಇಂತಹ ನೈತಿಕತೆಯ ಮಾದರಿಯನ್ನು ತೋರಿಸಬೇಕು ಮತ್ತು ಅವರೊಂದಿಗೆ ಸಹಾನುಭೂತಿ ತೋರಬೇಕು. ಎಂದಿಗೂ ಅಸಡ್ಡೆಯ ಸ್ವಭಾವ ಇರಬಾರದು.'

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್(ಅ) ಯಾರನ್ನಾದರೂ ಭೇಟಿಯಾಗುವಾಗ ಎಷ್ಟೊಂದು ಮುಗುಳ್ನಗುತ್ತಾ ಭೇಟಿಯಾಗುತ್ತಿದ್ದರೆಂದರೆ, ಅವರ ಎಲ್ಲ ಆಯಾಸವು ದೂರವಾಗುತ್ತಿತ್ತು. ಅವರ ಸಭೆಯಲ್ಲಿ ಕುಳಿತುಕೊಂಡರೆ ಅವರ ಸಂತೋಷವನ್ನು ನೋಡಿ, ಮನಸ್ಸಿನ ಎಲ್ಲ ದುಃಖಗಳು ತೊಳೆದುಹೋಗುತ್ತವೆ ಎಂದು ಪ್ರತಿಯೊಬ್ಬ ಅಹ್ಮದಿಯೂ ಭಾವಿಸುತ್ತಿದ್ದನು. ಎಂತಹ ಸಾಮಾನ್ಯ ವ್ಯಕ್ತಿಯ ಮಾತನ್ನು ಕೂಡ ಬಹಳ ಗಮನವಿಟ್ಟು ಕೇಳುವುದು ಮತ್ತು ಬಹಳ ಪ್ರೀತಿಯಿಂದ ಉತ್ತರಿಸುವುದು ಅವರ ಅಭ್ಯಾಸವಾಗಿತ್ತು. ಹಝ್ರತ್ ಮಸೀಹ್ ಮೌಊದ್(ಅ)ರಿಗೆ ತನ್ನ ಮೇಲೆ ಹೆಚ್ಚು ಪ್ರೀತಿಯಿದೆ ಎಂದು ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಮನಸ್ಸಿನಲ್ಲಿ ಭಾವಿಸುತ್ತಿದ್ದನು. ಸಭೆಯಲ್ಲಿ ಕೆಲವೊಮ್ಮೆ ಸಭೆಯ ಶಿಷ್ಟಾಚಾರದ ಅರಿವಿಲ್ಲದವರೂ ಬಹಳ ಹೊತ್ತಿನವರೆಗೆ ತಮ್ಮ ಮಾತುಗಳನ್ನು ಹೇಳುತ್ತಲೇ ಇರುತ್ತಿದ್ದರು ಮತ್ತು ಹಝ್ರತ್ ಮಸೀಹ್ ಮೌಊದ್(ಅ) ಮೌನವಾಗಿ ಕೇಳುತ್ತಲೇ ಇರುತ್ತಿದ್ದರು. ಎಂದಿಗೂ ಯಾರೊಡನೆಯೂ 'ಸಾಕು ಮಾಡು' ಎಂದು ಹೇಳುತ್ತಿರಲಿಲ್ಲ. ಓರ್ವ ವ್ಯಕ್ತಿಯು ಹಝ್ರತ್ ಮಸೀಹ್ ಮೌಊದ್(ಅ)ರ ಬಳಿ ಬಂದನು. ಅವನು ತಲೆ ಬಗ್ಗಿಸಿ ಅವರ ಪಾದಗಳ ಮೇಲಿಡಲು ಮುಂದಾದನು. ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಕೈಯಿಂದ ಅವನ ತಲೆಯನ್ನು ಸರಿಸಿ ಹೀಗೆ ಹೇಳಿದರು: 'ಇದು ಸರಿಯಾದ ಕ್ರಮವಲ್ಲ. ಅಸ್ಸಲಾಮು ಅಲೈಕುಮ್ ಎಂದು ಹೇಳಬೇಕು ಮತ್ತು ಹಸ್ತಲಾಘವ ಮಾಡಬೇಕು.'

ಫಕೀರರು ಮತ್ತು ದರ್ಗಾದ ಪೀಠಾಧಿಪತಿಗಳನ್ನು ಇಷ್ಟಪಡುತ್ತಿದ್ದ ಒಬ್ಬ ವ್ಯಕ್ತಿ ನಮ್ಮ ಮಸೀದಿಗೆ ಬಂದರು. ಜನರು ಮುಕ್ತವಾಗಿ ಮಾತನಾಡುವುದನ್ನು ಕಂಡು ಆತ ಆಶ್ಚರ್ಯಚಕಿತನಾದನು. ಅವನು ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ಹೀಗೆ ಹೇಳಿದನು: 'ನಿಮ್ಮ ಮಸೀದಿಯಲ್ಲಿ ಜನರಿಗೆ ಸಭ್ಯತೆಯಿಲ್ಲ. ಜನರು ನಿಮ್ಮೊಂದಿಗೆ ನಿರ್ಭಯವಾಗಿ ಮಾತನಾಡುತ್ತಾರೆ'. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: 'ಮೃಗಗಳಿಗೆ ಹೆದರುವಂತೆ ಜನರು ನನ್ನನ್ನು ಕಂಡು ಹೆದರುವಷ್ಟು ನಾನು ಕ್ರೂರವಾಗಿ ಮತ್ತು ಭಯಾನಕವಾಗಿ ಕುಳಿತುಕೊಳ್ಳುವುದು ನನ್ನ ರೀತಿಯಲ್ಲ. ನಾನು ವಿಗ್ರಹದಂತೆ ಆಗುವುದನ್ನು ತೀರಾ ಇಷ್ಟಪಡುವುದಿಲ್ಲ. ನಾನು ವಿಗ್ರಹಾರಾಧನೆಯನ್ನು ವಿರೋಧಿಸಲು ಬಂದಿದ್ದೇನೆಯೇ ಹೊರತು, ನಾನೇ ಸ್ವತಃ ವಿಗ್ರಹವಾಗಿ ಜನರು ನನ್ನನ್ನು ಪೂಜಿಸುವಂತಾಗಲು ಅಲ್ಲ. ನಾನು ನನ್ನನ್ನು ಇತರರಿಗಿಂತ ಸ್ವಲ್ಪ ಕೂಡ ಶ್ರೇಷ್ಠನೆಂದು ಭಾವಿಸುವುದಿಲ್ಲ ಎಂಬುದನ್ನು ಅಲ್ಲಾಹನು ಚೆನ್ನಾಗಿ ಬಲ್ಲನು. ನನ್ನ ಪ್ರಕಾರ, ಅಹಂಕಾರಿಗಿಂತ ದೊಡ್ಡ ವಿಗ್ರಹಾರಾಧಕ ಮತ್ತು ಕೆಟ್ಟ ವ್ಯಕ್ತಿ ಬೇರಾರೂ ಇಲ್ಲ. ಅಹಂಕಾರಿಯು ಯಾವುದೇ ದೇವನನ್ನು ಆರಾಧಿಸುವುದಿಲ್ಲ, ಬದಲಾಗಿ ಅವನು ತನ್ನನ್ನೇ ಆರಾಧಿಸುತ್ತಾನೆ.'

ಹಝ್ರತ್ ಶೇಖ್ ಅಬ್ದುಲ್ ಖಾದಿರ್ ಸಾಹಿಬ್(ರ) ಬರೆಯುತ್ತಾರೆ: ಹಝ್ರತ್ ಮಿರ್ಝಾ ಸುಲ್ತಾನ್ ಅಹ್ಮದ್ ಸಾಹಿಬ್ ಹೇಳುತ್ತಿದ್ದರು, ತಂದೆಯವರು ತಮ್ಮ ಜೀವನವನ್ನು ಒಬ್ಬ ಮೊಘಲ ರಾಜನಂತೆ ಸಾಗಿಸಲಿಲ್ಲ, ಬದಲಾಗಿ ಒಬ್ಬ ಫಕೀರನಂತೆ ಸಾಗಿಸಿದ್ದರು ಎಂದು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: 'ತಮ್ಮ ಜೀವನವನ್ನು ವಿನಯ ಮತ್ತು ನಮ್ರತೆಯಲ್ಲಿ ಸಾಗಿಸಬೇಕೆಂಬುದು ತಖ್ವಗೆ ಇರುವ ನಿಬಂಧನೆಯಾಗಿದೆ. ಅನಗತ್ಯವಾಗಿ ಕೋಪಗೊಳ್ಳದಿರುವ ಗುಣ ತಖ್ವದ ಒಂದು ಅಂಶವಾಗಿದೆ. ದೊಡ್ಡ ದೊಡ್ಡ ಜ್ಞಾನಿಗಳು ಮತ್ತು ಸತ್ಯವಂತರಿಗೂ ಕೊನೆಯ ಕಠಿಣ ಹಂತವು ಕೋಪದಿಂದ ಪಾರಾಗುವುದೇ ಆಗಿದೆ. ಅಹಂಕಾರ ಮತ್ತು ಗರ್ವವು ಕೋಪದಿಂದ ಹುಟ್ಟುತ್ತದೆ. ಹಾಗೆಯೇ ಕೆಲವೊಮ್ಮೆ ಕೋಪವು, ಅಹಂಕಾರ ಮತ್ತು ಗರ್ವದ ಫಲಿತಾಂಶವೂ ಆಗಿರುತ್ತದೆ. ಏಕೆಂದರೆ, ಮನುಷ್ಯನು ಸ್ವತಃ ತಾನು ಇತರರಿಗಿಂತ ಶ್ರೇಷ್ಠನೆಂದು ಭಾವಿಸುವಾಗಲೇ ಕೋಪವು ಉಂಟಾಗುತ್ತದೆ. ನನ್ನ ಜಮಾಅತಿನವರು ಪರಸ್ಪರ ಚಿಕ್ಕವರು ಅಥವಾ ದೊಡ್ಡವರು ಎಂದು ಭಾವಿಸುವುದಾಗಲಿ, ಅಥವಾ ಪರಸ್ಪರರ ಮೇಲೆ ಗರ್ವ ಪಡುವುದಾಗಲಿ ಅಥವಾ ಕೀಳರಿಮೆಯಿಂದ ನೋಡುವುದಾಗಲಿ ನನಗೆ ಇಷ್ಟವಿಲ್ಲ. ದೊಡ್ಡವರು ಯಾರು ಅಥವಾ ಚಿಕ್ಕವರು ಯಾರು ಎಂದು ಅಲ್ಲಾಹನು ಬಲ್ಲನು. ಕೆಲವರು ದೊಡ್ಡವರನ್ನು ಭೇಟಿಯಾಗುವಾಗ ಬಹಳ ಮರ್ಯಾದೆಯಿಂದ ವರ್ತಿಸುತ್ತಾರೆ. ಆದರೆ ಬಡವರ ಮಾತನ್ನು ನಮ್ರತೆಯಿಂದ ಕೇಳುವವನು, ಅವರನ್ನು ಸಂತೈಸುವವನು ಮತ್ತು ಅವರ ಮಾತಿಗೆ ಗೌರವ ನೀಡುವವನೇ ವಾಸ್ತವದಲ್ಲಿ ದೊಡ್ಡವನು. ನೋವುಂಟು ಮಾಡುವಂತಹ ಯಾವುದೇ ಕೀಳುಮಾತುಗಳು ಅವನ ಬಾಯಿಂದ ಬರಬಾರದು. ಅಲ್ಲಾಹನು ಹೇಳುತ್ತಾನೆ: 'ವಲಾ ತನಾಬಝೂ ಬಿಲ್ ಅಲ್‌ಖಾಬ್, ಬಿಅ್‌ಸಲ್ ಇಸ್ಮುಲ್ ಫುಸೂಕು ಬಅ್‌ದಲ್ ಈಮಾನ್, ವಮಲ್ಲಮ್ ಯತುಬ್ ಫ ಉಲಾಯಿಕ ಹುಮುಝ್ಝಾಲಿಮೂನ್' (ಸೂರಃ ಹುಜುರಾತ್: 12). ಅಂದರೆ ನೀವು ಪರಸ್ಪರ ಕೆಟ್ಟ ಹೆಸರುಗಳಿಂದ ಕರೆಯಬೇಡಿ. ಇದು ಪಾಪಿಗಳ ಮತ್ತು ದುಷ್ಟರ ಕೃತ್ಯವಾಗಿದೆ. ಯಾರು ಇತರರನ್ನು

ಅಪಹಾಸ್ಯ ಮಾಡುತ್ತಾನೊ, ಅವನು ತಾನೇ ಆ ಸ್ಥಿತಿಗೆ ತುತ್ತಾಗುವ ವರೆಗೂ ಸಾಯಲಾರನು. ನಿಮ್ಮ ಸಹೋದರರನ್ನು ಕೀಳಾಗಿ ಕಾಣಬೇಡಿ. ಎಲ್ಲರೂ ಒಂದೇ ಚಿಲುಮೆಯಿಂದ ನೀರು ಕುಡಿಯುವಾಗ, ಹೆಚ್ಚು ನೀರು ಕುಡಿಯುವ ಭಾಗ್ಯ ಯಾರಿಗಿದೆ ಎಂದು ಯಾರಿಗೆ ಗೊತ್ತು?'

(ಹುಝೂರ್ ಹೇಳಿದರು:) ಅಲ್ಲಾಹನು ನಮಗೆ ನೈಜ ರೀತಿಯಲ್ಲಿ ವಿನಯ ಮತ್ತು ನಮ್ರತೆಯನ್ನು ಬೆಳೆಸಿಕೊಳ್ಳುವ ಸೌಭಾಗ್ಯವನ್ನು ನೀಡಲಿ. ಹಝ್‌ರತ್ ಮಸೀಹ್ ಮೌಊದ್[ಅ]ರ ಬೈಅತ್ ಮಾಡಿಕೊಂಡು ನಾವು ನೈಜ ಇಸ್ಲಾಮಿನ ಬೋಧನೆಗಳನ್ನು ಪಾಲಿಸುವವರಾಗಲಿ ಹಾಗೂ ಅದರ ಹಕ್ಕನ್ನು ಪೂರೈಸುವವರಾಗಲಿ. ಆಮೀನ್.

—————————————*****—————————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُبِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis[atba]***

At, ***'Masjid Mubarak',*** *Islamabad, Tilford,* U.K. On 05-06-2026

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email*****:** *khutuba.kannada@gmail.com*

**You can find all the Sermons archived at**: www.alislam.org/friday-sermon